दक्षिण भारत राष्ट्रमत/बेंगलूर.
DAKSHIN BHARAT RASHTRA MATH/SBC
17 AUG 2017



# विकास इंजन के रूप में भूमिका निभा रहा है दक्षिण पश्चिम रेलवे : गुप्ता



**हुब्बल्ली।** दक्षिण पश्चिम रेलवे (दपरे) के महाप्रबंधक एके गुप्ता ने स्वतंत्रता दिवस पर हुब्बल्ली में झंडारोहण किया। इस अवसर पर उन्होंने गार्ड ऑफ ऑनर के साथ परेड की सलामी ली। कार्यक्रम को संबोधित करते हुए गुप्ता ने कहा कि आज के स्वतंत्रता दिवस को संकल्प पर्व यानी राष्ट्र परिवर्तन संकल्प दिवस के रूप में मानाया जा रहा है। यह प्रधानमंत्री नरेन्द्र मोदी द्वारा राष्ट्र निर्माण में परिवर्तन लाने हेतु शुरु किया गया है। उन्होंने कहा कि भारतीय रेलवे जबरदस्त परिवर्तन की ओर अग्रसर है और दपरे कर्नाटक और पड़ोसी राज्यों के विकास के लिए एक विकास इंजन के रूप में महत्वपूर्ण भूमिका निभा रही है। दपरे बेहतर यात्री सेवाओं के साथ ही अवसंरचना विकास के लिए सर्वोच्च प्राथमिकता देती है।

उन्होंने कहा कि पिछले वित्त वर्ष के दौरान दपरे ने 44.2 मिलियन टन (+5 प्रतिशत) का लदान किया है और 192.6 मिलियन से अधिक यात्रियों (+2 प्रतिशत) का वहन किया है। वहीं मौजूदा वित्त वर्ष के प्रथम चार महीनों में माल ढुलाई करीब 14 मिलियन रहा है जो पिछले वर्ष की इसी अवधि की तुलना में 2 प्रतिशत अधिक है। इसी भांति यात्री वहन की संख्या भी पिछले वर्ष की तुलना में 4 प्रतिशत अधिक है। रेलवे की समयपाबंदी 96 प्रतिशत है और यह भारतीय रेल पर सर्वोच्च निष्पादनों में से एक है। गुप्ता ने कहा कि गाड़ी परिचालन में संरक्षा हमारी सर्वोच्च प्राथमिकता रहेगी। हमें दुर्घटना रहित परिचालन के लिए प्रतिबद्ध रहना है।

उन्होंने कहा कि दपरे के लिए स्वच्छता एक अन्य प्राथमिकता का क्षेत्र है। उन्होंने कहा कि यात्रियों की अतिरिक्त भीड़ से निपटने के लिए पिछले वर्ष के दौरान 3238 विशेष गाड़ियां चलाई गई और 2235 अतिरिक्त कोच लगाए गए। चालू वर्ष के दौरान जून तक 52 सुविधा गाड़ियां और 726 विशेष गाड़ियां चलाई गईं और 500 अतिरिक्त कोच लगाए गए हैं।



## हुब्बल्ली मंडल में झंडारोहण

दक्षिण पश्चिम रेलवे के हुब्बल्ली मंडल में मंगलववार को स्वतंत्रता दिवस पर मंडलीय रेल प्रबंधक अरुण कुमार जैन ने राष्ट्र ध्वज फराया जिसके बाद उन्हें आरपीएफ की ओर से गार्ड ऑफ ऑनर दिया गया। बाद में उन्होंने आरपीएफ, सिविल डिफेंस संगठनों, स्काउट एंड गाइड की परेड की समीक्षा की। अपने उद्बोधन में उन्होंने हुब्बल्ली मंडल की विभिन्न उपलब्धियों का जिक्र किया। उन्होंने कहा कि इस वित्त वर्ष के पहले चार महीनों में हुब्बल्ली मंडल ने 136 लाख यात्रियों का वहन किया है और 121 करोड़ रुपए की आमदनी हुई है जो पिछले वर्ष की समान अवधि की तुलना में क्रमशः 4.25 प्रतिशत एवं 8.10 प्रतिशत ज्यादा है।



## बेंगलूरु मंडल में स्वतंत्रता दिवस

दक्षिण पश्चिम रेलवे के बेंगलूरु मंडल में मंगलववार को स्वतंत्रता दिवस समारोह मनाया गया। बेंगलूरु मंडल रेल प्रबंधक आर. एस. सक्सेना ने तिरंगा फहराया और उपस्थित जनसमूह को संबोधित किया। इस अवसर पर रेलवे सुरक्षा बल के तीन पलाटून और भारत स्काउट एंड गाइड की ओर से आकर्षक परेड की प्रस्तुति दी गई। साथ ही रंगारंग सांस्कृति कार्यक्रम का आयोजन हुआ।

डेक्कन हेराल्ड / हुबली
DECCAN HERALD/HUBLI.
16 AUG 2017

3

# Impressive growth by SWR: Gupta



SWR General Manager A K Gupta receiving the guard of honour by RPF personnel during the Independence Day celebrations held in Hubballi on Tuesday. DH PHOTO

**HUBBALLI:** South-Western Railway (SWR) General Manager A K Gupta has stated that the SWR had achieved an impressive growth during the previous financial year.

"It has loaded 44.2 million tonne of freight, which is 5% more compared to the load in 2015-16 and, carried more than 192.6 million passengers, which is 2% more as against the number of passengers carried in 2015-16. The punctuality of the SWR is 96%, which is one of the best in Indian Railways," he added.

He noted this while speaking after hoisting the national flag at the 71st Independence Day celebration organised by the SWR at the Railway Sports ground in Hubballi on Tuesday.

He said, the Union Railway Ministry recently gave a group award of ₹ 1 lakh to the Construction Unit, and also issued commendation certificates to the SWR. In the current year, 250 kms of doubling and new lines were targeted for commissioning, he added.

## Complements officers

Complimenting the officers, supervisors, and staff of the SWR zone for their dedicated efforts to achieve targets, he said, with the sincere and dedicated efforts of the staff and officers, the SWR achieved the unprecedented success in 2016-17 financial year.

He asked the workers and officers to work together as a team, to scale new heights of performance, to transform our Sankalp to Siddhi (resolve to attainment), the Central government's slogan to achieve excellence in work. "Let us all strive in spirit and soul to accomplish our resolve for building a new India," he added.

This independence day today was also being observed as 'Sankalp Parva', the day to resolve to transform India. This was launched by the Prime Minister to ignite transformation for creating a nation that all Indians proud of," he said.

On the occasion, Railway School children, and the employees gave colourful cultural programmes. Later, Mr Gupta distributed various awards to the staff, Scouts & Guides, and to the Meritorious girl students of the Railway High School in the SSLC examination held during 2016-17.

प्रजा वाणी/हुबली
PRAJA VANI/HUBLI.
16 AUG 2017

ಸ್ವಾತಂತ್ರ್ಯ ದಿನಾಚರಣೆಯಲ್ಲಿ ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಎ.ಕೆ. ಗುಪ್ತಾ ಹೇಳಿಕೆ

# '250 ಕಿ.ಮೀ. ಹೊಸ ಮಾರ್ಗ ನಿರ್ಮಾಣ ಗುರಿ'

ಪ್ರಜಾವಾಣಿ ವಾರ್ತೆ



ಹುಬ್ಬಳ್ಳಿಯ ರೈಲ್ವೆ ಮೈದಾನದಲ್ಲಿ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ನೈರುತ್ಯ ರೈಲ್ವೆ ವ್ಯವಸ್ಥಾಪಕ ಎ.ಕೆ. ಗುಪ್ತಾ ಆರ್‌ಪಿಎಫ್ ಪೊಲೀಸರಿಂದ ಗೌರವ ವಂದನೆ ಸ್ವೀಕರಿಸಿದರು

ಹುಬ್ಬಳ್ಳಿ: 'ಪ್ರಸಕ್ತ ಆರ್ಥಿಕ ವರ್ಷದಲ್ಲಿ 250 ಕಿ.ಮೀ. ಹೊಸ ರೈಲು ಮಾರ್ಗ ಮತ್ತು ಜೋಡಿ ಮಾರ್ಗವನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ' ಎಂದು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಎ.ಕೆ. ಗುಪ್ತಾ ತಿಳಿಸಿದರು.

ಇಲ್ಲಿನ ಕ್ಲಬ್ ರಸ್ತೆಯಲ್ಲಿರುವ ರೈಲ್ವೆ ಕ್ರೀಡಾ ಮೈದಾನದಲ್ಲಿ ಮಂಗಳವಾರ ನಡೆದ ಸ್ವಾತಂತ್ರ್ಯೋತ್ಸವದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿದ ಅವರು, 'ಕಳೆದ ವರ್ಷ ರೈಲ್ವೆ ಮೂಲ ಸೌಕರ್ಯ ಅಭಿವೃದ್ಧಿಗೆ ₹1,900 ಕೋಟಿ ವೆಚ್ಚ ಮಾಡಲಾಗಿದೆ. ನೈರುತ್ಯ ರೈಲ್ವೆ ಇತಿಹಾಸದಲ್ಲಿಯೇ ಇದು ಅತ್ಯಧಿಕ ಮೊತ್ತ. ಅಲ್ಲದೆ, ಕಳೆದ ವರ್ಷವೇ 201 ಕಿ.ಮೀ. ಹೊಸ ರೈಲುಮಾರ್ಗ ಪೂರ್ಣಗೊಳಿಸಿದ್ದು, ಈ ದಾಖಲೆ ಪ್ರಮಾಣದ ಕಾರ್ಯವನ್ನು ಗುರುತಿಸಿ, ರೈಲ್ವೆ ಸಚಿವರು ನಮ್ಮ ನಿರ್ಮಾಣ ವಿಭಾಗಕ್ಕೆ ₹1 ಲಕ್ಷ ನಗದು ಬಹುಮಾನ ಮತ್ತು ಪ್ರಶಂಸಾ ಪತ್ರ ನೀಡಿ ಪುರಸ್ಕರಿಸಿದ್ದಾರೆ' ಎಂದರು.

'ರೈಲುಗಳ ಕಾರ್ಯಾಚರಣೆಯಲ್ಲಿ

ಮುಂದುವರಿಸಿಕೊಂಡು ಹೋಗಬೇಕು. ಸುರಕ್ಷತೆಯ ಮೇಲೆ ಗಮನ ಕೇಂದ್ರೀಕರಿಸಲು ಪ್ರಮುಖ ಸ್ಥಳಗಳಲ್ಲಿ ನಿಯತಕಾಲಿಕ ಸುರಕ್ಷತಾ ಅಭಿಯಾನಗಳನ್ನು ಕೈಗೊಳ್ಳಲಾಗುತ್ತಿದೆ. ರೈಲುಗಳ ಕಾರ್ಯಾಚರಣೆಯಲ್ಲಿ ಸುರಕ್ಷತೆಯನ್ನು ಹೆಚ್ಚಿಸಲು 2016–17ನೇ ಆರ್ಥಿಕ ವರ್ಷದಲ್ಲಿ ಸೀಮಿತ ಎತ್ತರದ ಮೇಲ್ಸೇತುವೆ/ರಸ್ತೆ ಕೆಳ

72 ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ತೆಗೆದುಹಾಕಲಾಗಿದೆ. ಪ್ರಸಕ್ತ ವರ್ಷದಲ್ಲಿ 67 ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ತೆಗೆದುಹಾಕುವ ಗುರಿ ಹೊಂದಲಾಗಿದೆ' ಎಂದರು.

'ರೈಲ್ವೆಯು ನಾಳೆಯಿಂದ ಸ್ವಚ್ಛತಾ ಪಾಕ್ಷಿಕವನ್ನು ಆಚರಿಸುತ್ತಿದ್ದು ಸ್ವಚ್ಛತೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ

ಕೊಳ್ಳುವ ಮೂಲಕ ಈ ಅಭಿಯಾನವನ್ನು ಯಶಸ್ವಿಗೊಳಿಸೋಣ' ಎಂದರು.

'ನಮ್ಮ ಸ್ಕೌಟ್ಸ್ ಮತ್ತು ಗೈಡ್ಸ್‌ಗಳಿಗೆ 24 ರಾಜ್ಯ ಪುರಸ್ಕಾರ ಮತ್ತು 11 ರಾಷ್ಟ್ರಪತಿ ಪುರಸ್ಕಾರ ಲಭಿಸಿದ್ದು, 4 ಸ್ಕೌಟ್ ಮುಂದಾಳುಗಳು ಹಿಮಾಲಯ ಬ್ಯಾಡ್ಜ್ ಪಡೆದುಕೊಂಡಿದ್ದಾರೆ' ಎಂದು ಗುಪ್ತಾ ಹೆಮ್ಮೆಯಿಂದ ಹೇಳಿದರು.

'ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬೆಂಗಳೂರಿನಲ್ಲಿ 1 ಎಸ್ಕಲೇಟರ್, ಹೊಸಪೇಟೆ ಹಾಗೂ ಬೆಳಗಾವಿಯಲ್ಲಿ ತಲಾ 2 ಲಿಫ್ಟ್‌ಗಳು ಮತ್ತು 3 ನಿಲ್ದಾಣಗಳಲ್ಲಿ ಪಾದಚಾರಿ ಮೇಲ್ಸೇತುವೆಗಳನ್ನು ಒದಗಿಸುವ ಯೋಜನೆಯಿದೆ' ಎಂದರು.

'ಡಿಜಿಟಲ್ ಭಾರತದ ಅಂಗವಾಗಿ ನೈರುತ್ಯ ರೈಲ್ವೆ ಬೆಂಗಳೂರು, ಯಶವಂತಪುರ, ಮೈಸೂರು ಮತ್ತು ಹುಬ್ಬಳ್ಳಿ ನಿಲ್ದಾಣಗಳಲ್ಲಿ ವೈ-ಫೈ ಸೌಲಭ್ಯ ಒದಗಿಸಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯಕ್ಕೆ ಇನ್ನೂ 12 'ಎ' ದರ್ಜೆಯ ನಿಲ್ದಾಣಗಳಲ್ಲಿ ವೈ-ಫೈ ಸೌಲಭ್ಯ ಒದಗಿಸಲಾಗುವುದು' ಎಂದು ಅವರು ಹೇಳಿದರು.

ಆರ್‌ಪಿಎಫ್‌ನಿಂದ ಆಕರ್ಷಕ ಪಥಸಂಚಲನ ನಡೆಯಿತು. ಎ.ಕೆ. ಗುಪ್ತಾ

THE NEW INDIAN EXPRESS
02 HUBBALLI THURSDAY 17.08.2017

# SWR plans to lay 250-km railway line this year

**Ministry of Railways had recently given a group award of Rs·1 lakh to the SWR construction unit and issued commendation certificates**



SWR general manager A K Gupta inspecting parade given by the RPF personal as part of the Independence Day celebration at SWR headquarter in Hubballi.

**EXPRESS NEWS SERVICE**
@Hubballi

AFTER commissioning the 201-km new railway line previous year, the South Western Railway has set a target of laying 250-km railway line this financial year, said SWR general manager Ashok Kumar Gupta.

After unfurling the national flag as part of Independence Day celebrations here on Tuesday, Gupta said the Ministry of Railways had recently given a group award of Rs 1 lakh to the SWR construction unit and issued commendation certificates for its better performance.

He urged officials to work together as a team, scale new heights of performance to transform Sankalp to Siddhi, (resolve to attainment). "This Independence Day is also being observed as 'Sankalp Parva'. Let us all strive in spirit and soul to accomplish our resolve for building a new India," Gupta said.

The general manager administered Swatchhata Pledge and New India Pledge called 'Sanklap Se Siddhi' to work towards a corruption-free, poverty-free, terrorism-free, casteism-free and communalism-free India. Prior to this, Gupta inspected the parade and received the guard of honour of Railway Protection Force (RPF). Later, cultural programmes were held.

### Growth in passenger segment

In another function held at Hubballi division, divisional railway manager Arun Jain said despite stiff competition from road transport, the Hubballi division has registered growth in passenger service segment. During the first four months of 2017-18, the division has carried 136 lakh passengers and earned Rs 121 crore which is an increase of 4.25 per cent and 8.10 per cent, respectively as compared to corresponding period of previous year.

The freight loading in the first quarter of this financial year was 12.19 million tonnes, leading to an earning of Rs 952 crore. Briefing about infrastructure improvements, he said 29-km of line doubling has been done from Shivthan-Londa-Tinaighat and Koppal to Bhanapur. Also, 89-km of new line has now been opened for passenger service from Rayadurg to Kadiridevarapalli and Ginigera to Chikkabenakal.

विजय कर्नाटक/हुबली
VIJAYA KARNATAKA/HUBLI
17 AUG 2017



ಹುಬ್ಬಳ್ಳಿಯ ನೈರುತ್ಯ ರೈಲ್ವೆವಲಯ ಕ್ರೀಡಾ ಮೈದಾನದಲ್ಲಿ ನಡೆದ ಸ್ವಾತಂತ್ರ್ಯೋತ್ಸವ ದಿನಾಚರಣೆಯಲ್ಲಿ ಪ್ರಧಾನ ವ್ಯವಸ್ಥಾಪಕ ಅಶೋಕ ಕುಮಾರ ಗುಪ್ತಾ ಪೊಲೀಸ್ ವಂದನೆ ಸ್ವೀಕರಿಸಿದರು.

## 250 ಕಿ.ಮೀ. ರೈಲು ಮಾರ್ಗ

**ಹುಬ್ಬಳ್ಳಿ:** ನೈರುತ್ಯ ರೈಲ್ವೆಯು ಈ ವರ್ಷ ಜೋಡಿ ಮಾರ್ಗ ಸೇರಿ 250 ಕಿ.ಮೀ. ಹೊಸ ರೈಲು ಮಾರ್ಗ ನಿರ್ಮಿಸುವ ಗುರಿ ಹೊಂದಲಾಗಿದೆ ಎಂದು ನೈರುತ್ಯ ರೈಲ್ವೆವಲಯ ಪ್ರಧಾನ ವ್ಯವಸ್ಥಾಪಕ ಅಶೋಕಕುಮಾರ ಗುಪ್ತಾ ಹೇಳಿದರು. ನಗರದ ರೈಲ್ವೆ ಕ್ರೀಡಾ ಮೈದಾನದಲ್ಲಿ ಮಂಗಳವಾರ ಧ್ವಜಾರೋಹಣ ನೆರವೇರಿಸಿ ಬಳಿಕ ಮಾತನಾಡಿದ ಅವರು, ಪ್ರಸಕ್ತ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳುಗಳಲ್ಲಿನ ಸರಕು ಸಾಗಣೆಯ ಪ್ರಮಾಣ 14 ಮಿಲಿಯನ್ ಟನ್‌ಗಳಾಗಿದ್ದು ಕಳೆದ ಆರ್ಥಿಕ ವರ್ಷದ ಇದೇ ಅವಧಿಗಿಂತ ಶೇ 2 ರಷ್ಟು ಹೆಚ್ಚಳ ದಾಖಲಿಸಿದೆ. ಈ ವರ್ಷದ ಮೊದಲ 4ತಿಂಗಳುಗಳಲ್ಲಿನ ಪ್ರಯಾಣಿಕರ ಸಂಖ್ಯೆಯಲ್ಲಿಯೂ ಕಳೆದ ವರ್ಷಕ್ಕಿಂತ 4 ರಷ್ಟು ಹೆಚ್ಚಳಗೊಂಡಿದೆ ಎಂದರು.

कन्नड प्रभा / बेलगाम
KANNADA PRABHA/BELGAUM 16 AUG 2017



ಉತ್ತಮ ಸೇವೆ | ನೈಋತ್ಯ ರೈಲ್ವೆ ವಲಯದ ವತಿಯಿಂದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಎ.ಕೆ. ಗುಪ್ತಾ

# ಅಭಿವೃದ್ಧಿ ಶಕ್ತಿಯಾಗಿ ರೈಲ್ವೆ ಇಲಾಖೆ ಕಾರ್ಯ

• **ಕನ್ನಡಪ್ರಭ ವಾರ್ತೆ** ಹುಬ್ಬಳ್ಳಿ

ಭಾರತೀಯ ರೈಲ್ವೆಯು ಅಗಾಧವಾದ ಬದಲಾವಣೆ ಹೊಂದುತ್ತಿದೆ. ನೈಋತ್ಯ ರೈಲ್ವೆಯು ಕರ್ನಾಟಕ ಮತ್ತು ನೆರೆಯ ರಾಜ್ಯಗಳ ಅಭಿವೃದ್ಧಿಯ ಚಾಲಕ ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ನೈರುತ್ಯ ರೈಲ್ವೆಯು ಮೂಲ ಸೌಕರ್ಯ ಅಭಿವೃದ್ಧಿಯೊಂದಿಗೆ ಪ್ರಯಾಣಿಕರಿಗೆ ವರ್ಧಿತ ಸೇವೆಗಳನ್ನು ಒದಗಿಸಲು ಹೆಚ್ಚಿನ ಆದ್ಯತೆ ನೀಡುತ್ತಿದೆ ಎಂದು ನೈಋತ್ಯ ರೈಲ್ವೆ ವಲಯದ ಪ್ರಧಾನ ವ್ಯವಸ್ಥಾಪಕ ಎ.ಕೆ. ಗುಪ್ತಾ ಹೇಳಿದರು.

ನೈಋತ್ಯ ರೈಲ್ವೆ ವಲಯದ ವತಿಯಿಂದ ಇಲ್ಲಿನ ಕ್ಲಬ್ ರಸ್ತೆಯ ರೈಲ್ವೆ ಮೈದಾನದಲ್ಲಿ ಮಂಗಳವಾರ ಆಯೋಜಿಸಿದ್ದ ಸ್ವಾತಂತ್ರ್ಯ ದಿನಾಚರಣೆ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ನೈಋತ್ಯ ರೈಲ್ವೆಯು ಪ್ರಮುಖ ಸಾಧನಾ ಮಾನದಂಡಗಳಾದ ಸರಕು ಸಾಗಣೆ, ಸಮಯ ಪಾಲನೆ, ಮೂಲ ಸೌಕರ್ಯ ಅಭಿವೃದ್ಧಿ ಮತ್ತಿತರ ಕಾರ್ಯದಲ್ಲಿ ಕಳೆದ ವರ್ಷ ನಿಗದಿಪಡಿಸಿದ್ದ ಗುರಿ ಮೀರಿ ಪ್ರಗತಿ ದಾಖಲಿಸಿದೆ ಎಂದರು.

KP



ಹುಬ್ಬಳ್ಳಿಯ ರೈಲ್ವೆ ಮೈದಾನದಲ್ಲಿ ವಲಯದ ಪ್ರಧಾನ ವ್ಯವಸ್ಥಾಪಕ ಎ.ಕೆ. ಗುಪ್ತಾ ಧ್ವಜಾರೋಹಣ ನೆರವೇರಿಸಿದರು.

ಕಳೆದ ಆರ್ಥಿಕ ವರ್ಷದಲ್ಲಿ ನೈಋತ್ಯ ರೈಲ್ವೆಯು 44.2 ಮಿಲಿಯನ್ ಟನ್ ಸರಕನ್ನು ಸಾಗಿಸಿದ್ದು, ಪ್ರಯಾಣಿಕರ ಸಂಖ್ಯೆ 192.6 ಮಿಲಿಯನ್‌ಗಿಂತಲೂ ಅಧಿಕವಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಸರಕು ಸಾಗಣೆಯ ಪ್ರಮಾಣವು ಸುಮಾರು 14 ಮಿಲಿಯನ್ ಟನ್‌ಗಳಾಗಿದ್ದು, ಕಳೆದ ಆರ್ಥಿಕ ವರ್ಷದ ಇದೇ ಅವಧಿಗಿಂತ ಸುಮಾರು ಶೇ. 2ರಷ್ಟು ಹೆಚ್ಚಳ ದಾಖಲಿಸಿದೆ. ಪ್ರಸಕ್ತ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳುಗಳಲ್ಲಿನ ಪ್ರಯಾಣಿಕರ ಸಂಖ್ಯೆಯು ಕಳೆದ ಆರ್ಥಿಕ ವರ್ಷದ ಇದೇ ಅವಧಿಗಿಂತ ಶೇ. 4ರಷ್ಟು ವೃದ್ಧಿಗೊಂಡಿದೆ. ಈ ರೈಲ್ವೆಯ ಸಮಯಪಾಲನೆಯು ಶೇ. 96 ಆಗಿದ್ದು, ಭಾರತೀಯ ರೈಲ್ವೆಯಲ್ಲಿನ ಅತ್ಯುತ್ತಮ ಸಾಧನೆಗಳಲ್ಲೊಂದಾಗಿದೆ ಎಂದರು.

ಮೂಲ ಸೌಕರ್ಯ ಅಭಿವೃದ್ಧಿಗೆ ಕಳೆದ ವರ್ಷ ನೈಋತ್ಯ ರೈಲ್ವೆಯ ಇತಿಹಾಸದಲ್ಲಿಯೇ ಅತ್ಯಧಿಕ ಮೊತ್ತವಾದ ₹1,900 ಕೋಟಿ ವೆಚ್ಚ ಮಾಡಲಾಗಿದೆ. ನೈಋತ್ಯ ರೈಲ್ವೆಯು 201 ಕಿಮೀ ಹೊಸ ರೈಲು ಮಾರ್ಗ ಪೂರ್ಣಗೊಳಿಸಿದೆ. ಈ ದಾಖಲೆ ಪ್ರಮಾಣದ ಕಾರ್ಯ ಗುರುತಿಸಿ ರೈಲ್ವೆ ಸಚಿವರು ನಿರ್ಮಾಣ ವಿಭಾಗಕ್ಕೆ ಒಂದು ಲಕ್ಷ ರುಪಾಯಿ ನಗದು ಬಹುಮಾನ ಮತ್ತು ಪ್ರಶಂಸಾ ಪ್ರಮಾಣಪತ್ರ ನೀಡಿ ಪುರಸ್ಕರಿಸಿದ್ದಾರೆ ಎಂದರು.

ರೈಲ್ವೆ ವಲಯದ ಹಿರಿಯ ಅಧಿಕಾರಿಗಳು ಹಾಗೂ ಸಿಬ್ಬಂದಿ ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

**ಡಿಜಿಟಲ್ ಭಾರತದ ಅಂಗವಾಗಿ ನೈಋತ್ಯ ರೈಲ್ವೆಯು ಬೆಂಗಳೂರು, ಯಶವಂತಪುರ, ಮೈಸೂರು ಮತ್ತು ಹುಬ್ಬಳ್ಳಿ ನಿಲ್ದಾಣಗಳಲ್ಲಿ ವೈಫೈ ಸೌಲಭ್ಯ ಒದಗಿಸಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಇನ್ನೂ 12 'ಎ' ವರ್ಗದ ನಿಲ್ದಾಣಗಳಲ್ಲಿ ವೈಫೈ ಸೌಲಭ್ಯ ಒದಗಿಸಲಾಗುವುದು.**

• **ಎ.ಕೆ. ಗುಪ್ತಾ** ಪ್ರಧಾನ ವ್ಯವಸ್ಥಾಪಕರು ನೈಋತ್ಯ ರೈಲ್ವೆ ವಲಯ ಹುಬ್ಬಳ್ಳಿ

उदय वाणी / मणिपाल
UDAY VANI/MANIPAL 16 AUG 2017

# 250 ಕಿಮೀ ಹೊಸ ರೈಲು ಮಾರ್ಗದ ಗುರಿ

■ ಮೂಲ ಸೌಕರ್ಯ ಅಭಿವೃದ್ಧಿಗೆ ಅತ್ಯಧಿಕ ಮೊತ್ತ 1900 ಕೋಟಿ ವೆಚ್ಚ: ಗುಪ್ತಾ ■ ರೈಲ್ವೆ ಮೈದಾನದಲ್ಲಿ ಧ್ವಜಾರೋಹಣ

ಹುಬ್ಬಳ್ಳಿ: ನೈರುತ್ಯ ರೈಲ್ವೆ ಪ್ರಸಕ್ತ ಆರ್ಥಿಕ ವರ್ಷದಲ್ಲಿ 250 ಕಿ.ಮೀ. ಹೊಸ ರೈಲು ಮಾರ್ಗ ಮತ್ತು ಜೋಡಿ ಮಾರ್ಗ ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದು ನೈರುತ್ಯ ರೈಲ್ವೆಯ ಪ್ರಧಾನ ವ್ಯವಸ್ಥಾಪಕ ಎ.ಕೆ. ಗುಪ್ತಾ ಹೇಳಿದರು.

ಸ್ವಾತಂತ್ರ್ಯೋತ್ಸವ ಅಂಗವಾಗಿ ಇಲ್ಲಿನ ಕ್ಲಬ್ ರಸ್ತೆಯ ರೈಲ್ವೆ ಮೈದಾನದಲ್ಲಿ ಇಲಾಖೆ ವತಿಯಿಂದ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು.

ನೈರುತ್ಯ ರೈಲ್ವೆ ವಲಯದ ಇತಿಹಾಸದಲ್ಲೇ ಕಳೆದ ವರ್ಷ ಮೂಲ ಸೌಕರ್ಯ ಅಭಿವೃದ್ಧಿಗೆ ಅತ್ಯಧಿಕ ಮೊತ್ತವಾದ 1900 ಕೋಟಿ ರೂ. ವೆಚ್ಚ ಮಾಡಲಾಗಿದೆ. ಇಲಾಖೆಯು 201 ಕಿ.ಮೀ. ಹೊಸ ರೈಲು ಮಾರ್ಗ ಪೂರ್ಣಗೊಳಿಸಿದೆ. ಈ ದಾಖಲೆ ಪ್ರಮಾಣದ ಕಾರ್ಯ ಗುರುತಿಸಿ ರೈಲ್ವೆ ಸಚಿವರು ವಲಯದ ನಿರ್ಮಾಣ ವಿಭಾಗಕ್ಕೆ 1 ಲಕ್ಷ ರೂ. ನಗದು ಬಹುಮಾನ, ಪ್ರಶಂಸಾ ಪ್ರಮಾಣ ಪತ್ರ ನೀಡಿ ಪುರಸ್ಕರಿಸಿದ್ದಾರೆ ಎಂದರು.

ಕಳೆದ ಆರ್ಥಿಕ ವರ್ಷದಲ್ಲಿ ಎಸ್‌ಡಬ್ಲ್ಯುಆರ್ 44.2 ಮಿಲಿಯನ್ ಟನ್ ಸರಕು ಸಾಗಿಸಿದ್ದು (+ಶೇ.5), ಪ್ರಯಾಣಿಸಿದ ಪ್ರಯಾಣಿಕರ ಸಂಖ್ಯೆ 192.6 ಮಿಲಿಯನ್‌ಗಿಂತಲೂ ಅಧಿಕವಾಗಿದೆ (+ಶೇ.2). ಪ್ರಸಕ್ತ ಆರ್ಥಿಕ ವರ್ಷದ ಮೊದಲ ನಾಲ್ಕು ತಿಂಗಳಲ್ಲಿ ಸರಕು ಸಾಗಣೆಯ ಪ್ರಮಾಣವು ಸುಮಾರು 14 ಮಿಲಿಯನ್ ಟನ್ ಗಳಾಗಿದ್ದು, ಕಳೆದ ಆರ್ಥಿಕ ವರ್ಷದ ಇದೇ ನಾಲ್ಕು ತಿಂಗಳಲ್ಲಿನ ಪ್ರಯಾಣಿಕರ ಸಂಖ್ಯೆ ಕಳೆದ ಆರ್ಥಿಕ ವರ್ಷದ ಇದೇ ಅವಧಿಗಿಂತ ಶೇ.4ರಷ್ಟು ವೃದ್ಧಿಯಾಗಿದೆ. ಇಲಾಖೆಯ ಸಮಯಪಾಲನೆಯು ಶೇ.96 ಆಗಿದ್ದು ಇದು ಭಾರತೀಯ ರೈಲ್ವೆಯಲ್ಲಿನ ಅತ್ಯುತ್ತಮ ಸಾಧನೆಗಳಲ್ಲೊಂದಾಗಿದೆ ಎಂದರು.



ಹುಬ್ಬಳ್ಳಿ: ಎಸ್‌ಡಬ್ಲ್ಯುಆರ್‌ನ ಪ್ರಧಾನ ವ್ಯವಸ್ಥಾಪಕ ಎ.ಕೆ. ಗುಪ್ತಾ ಧ್ವಜಾರೋಹಣ ನೆರವೇರಿಸಿ ಆರ್‌ಪಿಎಫ್ ಸಿಬ್ಬಂದಿಯಿಂದ ಗೌರವ ವಂದನೆ ಸ್ವೀಕರಿಸಿದರು.

ಸುರಕ್ಷತೆಯ ಮೇಲೆ ಗಮನ ಕೇಂದ್ರೀಕರಿಸಲು ಪ್ರಮುಖ ಸ್ಥಳಗಳಲ್ಲಿ ನಿಯತಕಾಲಿಕ ಸುರಕ್ಷತಾ ಅಭಿಯಾನಗಳನ್ನು ಕೈಗೊಳ್ಳಲಾಗುತ್ತಿದೆ. ರೈಲುಗಳ ಕಾರ್ಯಾಚರಣೆಯಲ್ಲಿ ಸುರಕ್ಷತೆ ಹೆಚ್ಚಿಸಲು 2016-17ನೇ ಆರ್ಥಿಕ ವರ್ಷದಲ್ಲಿ ಸೀಮಿತ ಎತ್ತರದ ಸಬ್‌ವೇ/ರಸ್ತೆ ಮೇಲ್ಸೇತುವೆ/ರಸ್ತೆ ಕೆಳಸೇತುವೆಗಳನ್ನು ನಿರ್ಮಿಸುವ ಮೂಲಕ ಕ್ರಾಸಿಂಗ್ ಗೇಟ್‌ಗಳನ್ನು ತೆಗೆದು ಹಾಕುವ ಗುರಿ ಹೊಂದಲಾಗಿದೆ ಎಂದರು.

ರೈಲ್ವೆಯು ಆ.16ರಿಂದ ಸ್ವಚ್ಛತಾ ಪಾಕ್ಷಿಕ ಆಚರಿಸುತ್ತಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ ಬೆಂಗಳೂರಿನಲ್ಲಿ 1 ಎಸ್ಕಲೇಟರ್, ಹೊಸಪೇಟೆ ಹಾಗೂ ಬೆಳಗಾವಿಯಲ್ಲಿ ತಲಾ 2 ಲಿಫ್ಟ್‌ಗಳು ಮತ್ತು 3 ನಿಲ್ದಾಣಗಳಲ್ಲಿ ಪಾದಚಾರಿ ಮೇಲ್ಸೇತುವೆಗಳನ್ನು ಒದಗಿಸುವ ಯೋಜನೆಯಿದೆ. 'ಡಿಜಿಟಲ್ ಭಾರತ' ಅಂಗವಾಗಿ ನೈರುತ್ಯ ರೈಲ್ವೆಯ ಬೆಂಗಳೂರು, ಯಶವಂತಪುರ, ಮೈಸೂರು ಮತ್ತು ಹುಬ್ಬಳ್ಳಿ ನಿಲ್ದಾಣಗಳಲ್ಲಿ ವೈ-ಫೈ ಸೌಲಭ್ಯ ಒದಗಿಸಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ

## 4 ತಿಂಗಳಲ್ಲಿ 1073 ಕೋಟಿ ರೈಲ್ವೆ ಆದಾಯ: ಜೈನ್

ಹುಬ್ಬಳ್ಳಿ: ನೈರುತ್ಯ ರೈಲ್ವೆಯ ಹುಬ್ಬಳ್ಳಿ ವಿಭಾಗದಲ್ಲಿ ಪ್ರಸಕ್ತ ವಿತ್ತೀಯ ವರ್ಷದ 4 ತಿಂಗಳಲ್ಲಿ 136 ಲಕ್ಷ ಪ್ರಯಾಣಿಕರ ಸಾಗಣೆ ಮೂಲಕ 121 ಕೋಟಿ ರೂ. ಆದಾಯ ಗಳಿಸಿದೆ ಎಂದು ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅರುಣ ಕುಮಾರ ಜೈನ್ ಹೇಳಿದರು.

ಸ್ವಾತಂತ್ರ್ಯೋತ್ಸವ ನಿಮಿತ್ತ ಹುಬ್ಬಳ್ಳಿ ವಲಯದಲ್ಲಿ ನಡೆದ ಕಾರ್ಯಕ್ರಮದಲ್ಲಿ ಧ್ವಜಾರೋಹಣ ನೆರವೇರಿಸಿದ ನಂತರ ಅವರು ಮಾತನಾಡಿದರು.

ವರ್ಷದ ಮೊದಲ ತ್ರೈಮಾಸಿಕದಲ್ಲಿ 12.19 ಮಿಲಿಯನ್ ಟನ್ ಸರಕು ಸಾಗಣೆ ಮಾಡುವ ಮೂಲಕ 952 ಕೋಟಿ ರೂ. ಗಳಿಸಿದೆ ಎಂದರು. ಶಿವಥನ್-ಲೋಂಡಾ-ತಿನೈಘಾಟ್ ಹಾಗೂ ಕೊಪ್ಪಳ-ಭುವನೇಶ್ವರ ಮಧ್ಯೆ 28 ಕಿ.ಮೀ. ರೈಲ್ವೆ ಡಬ್ಲಿಂಗ್ ಮಾಡಲಾಗಿದೆ. ರಾಯದುರ್ಗದಿಂದ ಕದಿರಿದೇವರಪಳ್ಳಿ, ಗಿಣಗೇರಾ-ಚಿಕ್ಕಬೆನಕನಾಳ ಮಧ್ಯೆ 89 ಕಿ.ಮೀ. ಹೊಸ ಲೈನ್ ಮಾಡಲಾಗಿದೆ ಎಂದರು. ಇದೇ ಅವಧಿಯಲ್ಲಿ ವಿವಿಧ ರೈಲುಗಳಿಗೆ 216 ಕೋಚ್‌ಗಳನ್ನು ಜೋಡಿಸುವ ಮೂಲಕ ಪ್ರಯಾಣಿಕರಿಗೆ ಅನುಕೂಲ ಕಲ್ಪಿಸಲಾಗಿದೆ. ಹುಬ್ಬಳ್ಳಿ-ಮೈಸೂರು, ಹುಬ್ಬಳ್ಳಿ-ವಾರಣಾಸಿ, ಹುಬ್ಬಳ್ಳಿ-ಚಿಕ್ಕಬೆನಕನಾಳ ಮಧ್ಯೆ ಹೊಸ ರೈಲು ಸೇವೆ ಒದಗಿಸಲಾಗಿದೆ. ದೀರ್ಘ ಅಂತರದ 12 ರೈಲುಗಳಿಗೆ ಆನ್ ಬೋರ್ಡ್ ಹೌಸ್ ಕೀಪಿಂಗ್ ಸರ್ವೀಸ್ ಕಲ್ಪಿಸಲಾಗಿದೆ ಎಂದರು. ಆರ್.ಸಿ.ಪುಣೇಚಾ ಉಪಸ್ಥಿತರಿದ್ದರು.



संयुक्त कर्नाटक/हुबली
SAMYUKTHA KARNATAKA/HUBLI.
16 AUG 2017

### ನೈಋತ್ಯ ರೈಲ್ವೆಯಿಂದ ಪ್ರಯಾಣಿಕ, ಸರಕು ಸಾಗಣೆಯಲ್ಲಿ ಉತ್ತಮ ಸಾಧನೆ

# ಮೂಲಸೌಕರ್ಯ: ದಾಖಲೆ ₹1900 ಕೋಟಿ ವೆಚ್ಚ

ಹುಬ್ಬಳ್ಳಿ: ನೈಋತ್ಯ ರೈಲ್ವೆ ವಲಯವು ಪ್ರಸಕ್ತ ಹಣಕಾಸು ವರ್ಷದ ಮೊದಲ ನಾಲ್ಕು ತಿಂಗಳ ಅವಧಿಯಲ್ಲಿ 14 ದಶಲಕ್ಷ ಟನ್ ಸರಕು ಸಾಗಣೆ ಮಾಡಿದ್ದು, ಕಳೆದ ವರ್ಷ ಇದೇ ಅವಧಿಯಲ್ಲಾಗಿದ್ದ ಪ್ರಮಾಣಕ್ಕಿಂತ ಶೇ.26ಷ್ಟು ಹೆಚ್ಚಳವಾಗಿದೆ. ಪ್ರಯಾಣಿಕರ ಸಂಖ್ಯೆ ಕಳೆದ ಸಾಲಿನ ಈ ಅವಧಿಗಿಂತ ಶೇ.4ಕ್ಕಿಂತಲೂ ಹೆಚ್ಚಿನ ಪ್ರಮಾಣದಲ್ಲಿ ವೃದ್ಧಿಸಿದೆ ಎಂದು ಮಹಾಪ್ರಬಂಧಕ ಎ.ಕೆ.ಗುಪ್ತಾ ಹೇಳಿದ್ದಾರೆ.

ಇಲ್ಲಿಯ ನೈಋತ್ಯ ರೈಲ್ವೆ ಪ್ರಧಾನ ಕಚೇರಿಯಲ್ಲಿ 71ನೇ ಸ್ವಾತಂತ್ರ್ಯ ದಿನಾಚರಣೆ ಸಂದೇಶ ನೀಡಿದ ಅವರು ನೈಋತ್ಯ ರೈಲ್ವೆ ವಲಯವು ವಿವಿಧ ವಿಭಾಗಗಳಲ್ಲಿ ಮಾಡಿದ ಸಾಧನೆಯನ್ನು ಬಿಚ್ಚಿಟ್ಟರು.

ಕಳೆದ ವರ್ಷ ಮೂಲಸೌಕರ್ಯಗಳ ಅಭಿವೃದ್ಧಿಗೆ ನೈಋತ್ಯ ರೈಲ್ವೆ ಇತಿಹಾಸದಲ್ಲೇ ದಾಖಲೆ 1900 ಕೋಟಿ ರೂ ವೆಚ್ಚ ಮಾಡಲಾಗಿದೆ. 201 ಕಿ.ಮೀ. ಹೊಸ ಮಾರ್ಗಗಳಲ್ಲಿ ಕಾರ್ಯಾರಂಭಿಸಲಾಗಿದೆ. ಇದಕ್ಕಾಗಿ ರೈಲ್ವೆ ಸಚಿವರು ನಿರ್ಮಾಣ ಘಟಕದ ಸಿಬ್ಬಂದಿಗೆ ಒಂದು ಲಕ್ಷ ರೂ ಬಹುಮಾನ ಹಾಗೂ ಪ್ರಶಂಸಾಪತ್ರವನ್ನು ನೀಡಿದ್ದಾರೆ. ಪ್ರಸಕ್ತ ಸಾಲಿನಲ್ಲಿ 250 ಕಿ.ಮೀ. ಜೋಡುಮಾರ್ಗ ಮತ್ತು ಹೊಸಮಾರ್ಗಗಳಲ್ಲಿ ಕಾರ್ಯಾಚರಣೆ ಆರಂಭಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದರು.

ಸುರಕ್ಷತೆಗೆ ಪ್ರಮುಖ ಆದ್ಯತೆ ನೀಡಲಾಗಿದ್ದು, 2016-17ನೇ ಸಾಲಿನಲ್ಲಿ 72 ಮಾನವರಹಿತ ಲೆವೆಲ್ ಕ್ರಾಸಿಂಗ್ ಗೇಟ್‌ಗಳನ್ನು ಮುಚ್ಚಲಾಗಿದೆ. ಪ್ರಸಕ್ತ ಸಾಲಿನಲ್ಲಿ 67 ಗೇಟ್‌ಗಳನ್ನು ಮುಚ್ಚಲು ಉದ್ದೇಶಿಸಲಾಗಿದೆ. ಸ್ವಚ್ಛತಾ ಪಖವಾಡಾ ಕಾರ್ಯಕ್ರಮದ ಮೂಲಕ ರೈಲುಗಳು ಹಾಗೂ ರೈಲ್ವೆ ನಿಲ್ದಾಣಗಳಲ್ಲಿ ಸ್ವಚ್ಛತಾ ಅಭಿಯಾನ ಆರಂಭಿಸಲಾಗಿದೆ. ಸ್ಕೌಟ್ ಮತ್ತು ಗೈಡ್ಸ್‌ಗಳಿಗೆ 24 ರಾಜ್ಯ ಹಾಗೂ 11 ರಾಷ್ಟ್ರಪತಿ ಪ್ರಶಸ್ತಿಗಳು ಲಭಿಸಿವೆ. ನಾಲ್ವರು ಸ್ಕೌಟ್ಸ್ ನಾಯಕರಿಗೆ ಹಿಮಾಲಯ ಬ್ಯಾಜ್ ದೊರೆತಿದೆ. ಈ ವರ್ಷದಲ್ಲಿ ಬೆಂಗಳೂರಿನಲ್ಲಿ ಒಂದು ಎಸ್ಕಲೇಟರ್, ಹೊಸಪೇಟೆ, ಬೆಳಗಾವಿಗಳಲ್ಲಿ ತಲಾ ಎರಡು ಲಿಫ್ಟ್‌ಗಳನ್ನು ಆರಂಭಿಸಲಾಗಿದೆ ಎಂದು ವಿವರಿಸಿದರು.

ಮೇ ತಿಂಗಳಿನಲ್ಲಿ ಹುಬ್ಬಳ್ಳಿ-ಮೈಸೂರು ಡೈಲಿ ಎಕ್ಸ್‌ಪ್ರೆಸ್ ಹಾಗೂ ಹುಬ್ಬಳ್ಳಿ-ವಾರಾಣಸಿ ವೀಕ್ಲಿ ಎಕ್ಸ್‌ಪ್ರೆಸ್ ಎಂಬ ಎರಡು ಹೊಸ ರೈಲುಗಳನ್ನು ಆರಂಭಿಸಲಾಗಿದೆ. ಎಪ್ರಿಲ್‌ನಲ್ಲಿ ಯಶವಂತಪುರ-ಮಂಗಳೂರು ರೈಲು ಸಂಚಾರ ಆರಂಭಿಸಲಾಗಿದೆ. ಪ್ರಯಾಣಿಕರ ಬೇಡಿಕೆಗೆ ಅನುಗುಣವಾಗಿ ಕಳೆದ ವರ್ಷ 3238 ಪ್ರತ್ಯೇಕ ಟ್ರಿಪ್, 2235 ಹೆಚ್ಚುವರಿ ಕೋಚ್‌ಗಳನ್ನು ಜೋಡಿಸಲಾಗಿದೆ. ಪ್ರಸಕ್ತ ಸಾಲಿನ ಜೂನ್‌ವರೆಗೆ 52 ಸುವಿಧಾ, 726 ವಿಶೇಷ ರೈಲುಗಳನ್ನು ಓಡಿಸಲಾಗಿದೆ. 500 ಹೆಚ್ಚುವರಿ ಕೋಚ್‌ಗಳನ್ನು ಜೋಡಿಸಲಾಗಿದೆ. ಡಿಜಿಟಲ್ ಇಂಡಿಯಾ ಉಪಕ್ರಮದಡಿಯಲ್ಲಿ ಬೆಂಗಳೂರು, ಯಶವಂತಪುರ, ಮೈಸೂರು ಮತ್ತು ಹುಬ್ಬಳ್ಳಿ ನಿಲ್ದಾಣಗಳಲ್ಲಿ ವೈ-ಫೈ ಸೌಲಭ್ಯ ನೀಡಲಾಗಿದೆ. ಪ್ರಸಕ್ತ ಹಣಕಾಸು ಸಾಲಿನ ಅಂತ್ಯದ ವೇಳೆಗೆ 12 ಅಧಿಕ ಎ ಕೆಟಗರಿ ನಿಲ್ದಾಣಗಳಲ್ಲಿ ಈ ಸೌಲಭ್ಯ ಒದಗಿಸಲಾಗುವದು ಎಂದು ಹೇಳಿದರು.



ಸ್ವಾತಂತ್ರ್ಯ ದಿನಾಚರಣೆ ಅಂಗವಾಗಿ ನೈಋತ್ಯ ರೈಲ್ವೆ ಸ್ಪೋರ್ಟ್ಸ್ ಮೈದಾನದಲ್ಲಿ ನಡೆದ ಪರೇಡ್‌ನಲ್ಲಿ ನೈಋತ್ವ ರೈಲ್ವೆ ಪ್ರಧಾನ ವ್ಯವಸ್ಥಾಪಕ ಪೊಲೀಸ್ ಗೌರವ ಸ್ವೀಕರಿಸಿದರು.

ಕ್ರೀಡಾ ಚಟುವಟಿಕೆಗೆ ಸಂಬಂಧಿಸಿದಂತೆ ಚೆಸ್ ಪಂದ್ಯದಲ್ಲಿ ಹಿಮಾಂಶು ಶರ್ಮ ಭಾರತದ 47ನೇ ಗ್ರ್ಯಾಂಡ್ ಮಾಸ್ಟರ್ ಆಗಿದ್ದಾರೆ. ಒರಿಸ್ಸಾದಲ್ಲಿ ಇತ್ತೀಚೆಗೆ ಮುಕ್ತಾಯಗೊಂಡ 22ನೇ ಏಷ್ಯ ಅಥ್ಲೆಟಿಕ್ಸ್ ಕ್ರೀಡಾಕೂಟದಲ್ಲಿ ಬೆಂಗಳೂರು ವಿಭಾಗದ ವಿಶಂಭರ ಕೋಳೆಕರ ಅವರು 800 ಮೀ ಓಟದಲ್ಲಿ ಪಾಲ್ಗೊಂಡಿದ್ದಾರೆ. ಮೈಸೂರು ವಿಭಾಗದ ನವನೀತಾ ಪಿ.ಯು. ಬೆಂಗಳೂರಿನಲ್ಲಿ ನಡೆದ ಎಫ್ ಐಬಿಎ ಮಹಿಳೆಯರ ಏಷ್ಯಾ ಕಪ್ ಪಂದ್ಯಾವಳಿಯಲ್ಲಿ ಭಾಗವಹಿಸಿದ್ದಾರೆ. ಶೈಕ್ಷಣಿಕ ಚಟುವಟಿಕೆಗೆ ಸಂಬಂಧಿಸಿದಂತೆ ರೈಲ್ವೆ ನೌಕರರ ಮಕ್ಕಳಿಗೆ 92 ಲಕ್ಷ ರೂ ಮೌಲ್ಯದ ಸ್ಕಾಲರ್‌ಶಿಪ್ ಹಾಗೂ ಗ್ರುಪ್ ಡಿ ಸಿಬ್ಬಂದಿ ಮಕ್ಕಳಿಗಾಗಿ 43 ಲಕ್ಷ ರೂ ವೆಚ್ಚ ಮಾಡಲಾಗಿದೆ. ಪ್ರಸಕ್ತ ಸಾಲಿನಲ್ಲಿ ರೈಲ್ವೆ ನೌಕರರ 68 ಮಕ್ಕಳಿಗೆ ಸ್ಕಾಲರ್‌ಶಿಪ್ ನೀಡಲಾಗಿದೆ ಎಂದರು.

**ಹುಬ್ಬಳ್ಳಿ ವಿಭಾಗ**

ನೈಋತ್ಯ ರೈಲ್ವೆ ಹುಬ್ಬಳ್ಳಿ ವಿಭಾಗೀಯ ಪ್ರಬಂಧಕ ಅರುಣಕುಮಾರ್ ಜೈನ್ ಅವರು ಕೇಶ್ವಾಪುರದ ವಿಭಾಗೀಯ ಕಚೇರಿಯಲ್ಲಿ ನಡೆದ ಸ್ವಾತಂತ್ರ್ಯ ದಿನಾಚರಣೆ ಸಮಾರಂಭದಲ್ಲಿ ಧ್ವಜಾರೋಹಣ ನೆರವೇರಿಸಿ ಮಾತನಾಡಿ, ಪ್ರಸಕ್ತ ಹಣಕಾಸು ವರ್ಷದ ಪ್ರಥಮ ನಾಲ್ಕು ತಿಂಗಳಲ್ಲಿ ನೈಋತ್ಯ ರೈಲ್ವೆ ಹುಬ್ಬಳ್ಳಿ ವಿಭಾಗವು 136 ಲಕ್ಷ ಪ್ರಯಾಣಿಕರನ್ನು ಸಾಗಿಸಿ, 121 ಕೋಟಿ ರೂ ಗಳಿಸಿದೆ. ಸರಕು ಸಾಗಣೆ ಪ್ರಮಾಣ 12.19 ದಶಲಕ್ಷ ಟನ್‌ದಷ್ಟಾಗಿದ್ದು, 952 ಕೋಟಿ ರೂ ಆದಾಯ ಬಂದಿದೆ ಎಂದು ಹೇಳಿದರು.

ಶಿವಠಾಣ-ಲೋಂಡಾ-ತಿನೈಘಾಟ್ ಮತ್ತು ಕೊಪ್ಪಳ-ಭಾನಾಪುರಗಳ 29 ಕಿ.ಮೀ. ಜೋಡುಮಾರ್ಗ ನಿರ್ಮಾಣ ಮಾಡಲಾಗಿದೆ. ರಾಯದುರ್ಗ-ಕದ್ರಿದೇವರಾಪಳ್ಳಿ ಹಾಗೂ ಗಿಣಿಗೇರಾ-ಚಿಕ್ಕಬೆಣಕಲ್ 89 ಕಿ.ಮೀ. ನೂತನ ಮಾರ್ಗದಲ್ಲಿ ಕಾರ್ಯಾಚರಣೆ ಆರಂಭಿಸಲಾಗಿದೆ. ಬಾಗಲಕೋಟೆ-ಕಜ್ಜಿಡೋಣಿ ವಿಭಾಗದ 30 ಕಿ.ಮೀ. ಮಾರ್ಗದ ಪರಿಶೀಲನೆ ಮುಕ್ತಾಯಗೊಂಡಿದ್ದು, ಶೀಘ್ರದಲ್ಲಿ ಕಾರ್ಯಾರಂಭಿಸಲಿದೆ ಎಂದು ಹೇಳಿದರು.

विजय वाणी/ हुब्बल्लि
Vijaya Vani/ Hubballi

18 AUG 2017

# ರಾಜ್ಯಗಳ ಅಭಿವೃದ್ಧಿಗೆ ಚಾಲನಾ ಶಕ್ತಿಯಾದ ರೈಲ್ವೆ

**ಹುಬ್ಬಳ್ಳಿ:** ನೈರುತ್ಯ ರೈಲ್ವೆಯು ಕರ್ನಾಟಕ ಮತ್ತು ನೆರೆಯ ರಾಜ್ಯಗಳ ಅಭಿವೃದ್ಧಿಯ ಚಾಲಕ ಶಕ್ತಿಯಾಗಿ ಕಾರ್ಯ ನಿರ್ವಹಿಸುತ್ತಿದೆ. ನೈರುತ್ಯ ರೈಲ್ವೆಯು ಮೂಲಸೌಕರ್ಯ ಅಭಿವೃದ್ಧಿಯೊಂದಿಗೆ ಪ್ರಯಾಣಿಕರಿಗೆ ವರ್ಧಿತ ಸೇವೆಗಳನ್ನು ಒದಗಿಸಲು ಆದ್ಯತೆ ನೀಡುತ್ತಿದೆ ಎಂದು ಜಿಎಂ ಎ.ಕೆ. ಗುಪ್ತಾ ಹೇಳಿದರು. ನಗರದ ರೈಲ್ವೆ ನಿಲ್ದಾಣ ಆವರಣದಲ್ಲಿ ಮಂಗಳವಾರ ಜರುಗಿದ 71ನೇ ಸ್ವಾತಂತ್ರ್ಯೋತ್ಸವ ಧ್ವಜಾರೋಹಣ ನೆರವೇರಿಸಿ ಅವರು ಮಾತನಾಡಿದರು. ಮೂಲಭೂತ ಸೌಕರ್ಯ ಅಭಿವೃದ್ಧಿಗೆ ಕಳೆದ ವರ್ಷ 1900 ಕೋಟಿ ರೂ. ವೆಚ್ಚ ಮಾಡಲಾಗಿದ್ದು, 201 ಕಿ.ಮೀ. ಹೊಸ ರೈಲುಮಾರ್ಗ ಪೂರ್ಣಗೊಳಿಸಿದೆ. ಪ್ರಸಕ್ತ ಆರ್ಥಿಕ ವರ್ಷದಲ್ಲಿ 250 ಕಿ.ಮೀ. ಹೊಸ ರೈಲು ಮಾರ್ಗ ಮತ್ತು ಜೋಡಿ ಮಾರ್ಗವನ್ನು ಪೂರ್ಣಗೊಳಿಸುವ ಗುರಿ ಹೊಂದಲಾಗಿದೆ ಎಂದರು. ರೈಲುಗಳ ಹಾಗೂ ನಿಲ್ದಾಣಗಳಲ್ಲಿ ಸ್ವಚ್ಛತೆ ಸುಧಾರಿಸುವ ಸಂಕಲ್ಪ ಮಾಡೋಣ. ರೈಲ್ವೆಯು ಬುಧವಾರದಿಂದ ಸ್ವಚ್ಛತಾ ಪಾಕ್ಷಿಕ ಆಚರಿಸುತ್ತಿದ್ದು, ಸ್ವಚ್ಛತೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ಪೂರ್ಣವಾಗಿ ತೊಡಗಿಸಿಕೊಳ್ಳಬೇಕು ಎಂದರು. ಬೆಂಗಳೂರು, ಯಶವಂತಪುರ, ಮೈಸೂರು ಮತ್ತು ಹುಬ್ಬಳ್ಳಿ ನಿಲ್ದಾಣಗಳಲ್ಲಿ ವೈ-ಫೈ ಸೌಲಭ್ಯ ಒದಗಿಸಲಾಗಿದೆ. ಪ್ರಸಕ್ತ ಆರ್ಥಿಕ ವರ್ಷದ ಅಂತ್ಯದ ವೇಳೆಗೆ ಇನ್ನೂ 12 ಎ ವರ್ಗದ ನಿಲ್ದಾಣಗಳಲ್ಲಿ ವೈ-ಫೈ ಸೌಲಭ್ಯವನ್ನು ಒದಗಿಸಲಾಗುವುದು ಎಂದು ಅವರು ವಿವರಿಸಿದರು. ಈ ಸಂದರ್ಭದಲ್ಲಿ ಇಲಾಖೆ ಹಲವಾರು ಅಧಿಕಾರಿಗಳು ಉಪಸ್ಥಿತರಿದ್ದರು.



ಹುಬ್ಬಳ್ಳಿ ರೈಲ್ವೆ ನಿಲ್ದಾಣ ಆವರಣದಲ್ಲಿ ಜರುಗಿದ ಸ್ವಾತಂತ್ರ್ಯೋತ್ಸವ ಕಾರ್ಯಕ್ರಮದಲ್ಲಿ ನೈರುತ್ಯ ರೈಲ್ವೆ ವಲಯ ಜಿಎಂ ಎ.ಕೆ. ಗುಪ್ತಾ ಧ್ವಜಾರೋಹಣ ನೆರವೇರಿಸಿದರು.

राजस्थान पत्रीका/बेंगलूर
RAJASTHAN PATRIKA/BANGALORE
17 AUG 2017



# 216 अतिरिक्त बोगियां लगाई



**हुब्बल्ली.** शहर के केश्वापुर स्थित दक्षिण पश्चिम रेलवे (दपरे) हुब्बल्ली मंडल प्रबंधक कार्यालय में मंगलवार को स्वतंत्रता दिवस मनाया गया।

इस मौके पर ध्वजारोहण कर दपरे हुब्बल्ली मंडल प्रबंधक अरुणकुमार जैन ने कहा कि उनके कार्यकाल के चार माह में मंडल में 136 लाख लोगों ने सफर किया है जिससे 121 करोड़ रुपए आय प्राप्त हुई है। नई ट्रेनों के संचालन को लेकर यात्रियों की मांग के तहत 216 अतिरिक्त बोगियों को लगाया गया है। चार माह में हुब्बल्ली से मैसूरु, वाराणसी तथा चिक्कबेणकल के लिए नई ट्रेनें चलाई गई है।

इस अवसर पर रेलवे हाईस्कूल, दपरे महिला संगठन की स्कूल, भारत स्काउट एवं गायड्स के विद्यार्थियों ने सांस्कृतिक कार्यक्रम पेश किया। विभिन्न प्रतियोगिताओं के विजेता रेलवे कर्मचारियों को नकद पुरस्कार प्रदान किया गया। इस मौके पर अरुण कुमार जैन ने आरपीएफ की सलामी स्वीकार की।



प्रजा वाणी/हुबली
PRAJA VANI/HUBLI.
16 AUG 2017



# ಹುಬ್ಬಳ್ಳಿಯಲ್ಲಿ ವಿವಿಧೆಡೆ ಸ್ವಾತಂತ್ರ್ಯೋತ್ಸವ

ಹುಬ್ಬಳ್ಳಿ: ಇಲ್ಲಿನ ಕೇಶ್ವಾಪುರದಲ್ಲಿರುವ ವಿಭಾಗೀಯ ರೈಲ್ವೆ ವ್ಯವಸ್ಥಾಪಕರ ಕಚೇರಿಯಲ್ಲಿ ಮಂಗಳವಾರ ಸ್ವಾತಂತ್ರ್ಯ ದಿನ ಆಚರಿಸಲಾಯಿತು.

ಧ್ವಜಾರೋಹಣ ನೆರವೇರಿಸಿ ಮಾತನಾಡಿದ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅರುಣಕುಮಾರ್ ಜೈನ್, ಹುಬ್ಬಳ್ಳಿ ವಿಭಾಗೀಯ ರೈಲ್ವೆ ಕಳೆದ ವರ್ಷದಲ್ಲಿ ಮಾಡಿದ ಸಾಧನೆಗಳ ಮಾಹಿತಿ ನೀಡಿದರು. 'ನನ್ನ ಅಧಿಕಾರಾವಧಿಯ ನಾಲ್ಕು ತಿಂಗಳಲ್ಲಿ ವಿಭಾಗದಲ್ಲಿ 136 ಲಕ್ಷ ಜನ ಪ್ರಯಾಣಿಸಿದ್ದು, ₹121 ಕೋಟಿ ಆದಾಯ ಬಂದಿದೆ' ಎಂದರು.

'ಹೊಸ ರೈಲು ಸಂಚರಿಸಬೇಕು ಎಂಬ ಪ್ರಯಾಣಿಕರ ಬೇಡಿಕೆಗೆ ತಕ್ಕಂತೆ, 216 ಹೆಚ್ಚುವರಿ ಬೋಗಿಗಳನ್ನು ಅಳವಡಿಸಲಾಗಿದೆ. ನಾಲ್ಕು ತಿಂಗಳ ಅವಧಿಯಲ್ಲಿ ಹುಬ್ಬಳ್ಳಿಯಿಂದ ಮೈಸೂರು, ವಾರಾಣಸಿ ಹಾಗೂ ಚಿಕ್ಕಬೆಣಕಲ್‌ಗೆ ಹೊಸ ರೈಲುಗಳನ್ನು ಬಿಡಲಾಗಿದೆ' ಎಂದರು.

ರೈಲ್ವೆ ಪ್ರೌಢಶಾಲೆ, ಎಸ್‌ಡಬ್ಲ್ಯುಆರ್ ಮಹಿಳಾ ಸಂಘಟನೆಯ ಶಾಲೆ, ಭಾರತ್ ಸ್ಕೌಟ್ಸ್ ಮತ್ತು ಗೈಡ್ಸ್‌ನ ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ರೈಲ್ವೆ ಸಿಬ್ಬಂದಿಗೆ ನಗದು ಬಹುಮಾನ ನೀಡಲಾಯಿತು.



ಸ್ವಾತಂತ್ರ್ಯೋತ್ಸವದಲ್ಲಿ ಹುಬ್ಬಳ್ಳಿಯ ವಿಭಾಗೀಯ ರೈಲ್ವೆ ವ್ಯವಸ್ಥಾಪಕ ಅರುಣಕುಮಾರ್ ಜೈನ್ ರೈಲ್ವೆ ಪೊಲೀಸರ ಗೌರವ ವಂದನೆ ಸ್ವೀಕರಿಸಿದರು

टाइम्स आफ इंडिया/बेंगलूर
THE TIMES OF INDIA/BANGALORE
16 AUG 2017

# SOUDHA SHINES BRIGHT IN TRICOLOUR



15 AUG 2017
टाइम्स आफ इंडिया/बेंगलूर
THE TIMES OF INDIA/BANGALORE



# Rail Soudha glitters with tricolour

Sangamesh.Menasinakai
@timesgroup.com

**Hubballi:** Tricolour lights at Rail Soudha, the zonal headquarters of South Western Railway (SWR), are attracting people to Gadag Road. The SWR has decided to keep this decoration for the whole night on August 15.

The building is located at the entrance of Hubballi city from the Gadag side.

E Vijaya, chief public relations officer, SWR, informed that higher officials pitched the idea to decorate the three-storeyed building during national festivals. "On a pilot basis, it was decorated during last the Republic Day. After minor corrections, now it has emerged as a full-pledged exhibition for public. Any general public can visit this building after sunset on Tuesday," she said.


TOI

A decorated Rail Soudha, the headquarters of South Western Railway, is attracting people

Ananth Guruswamy, divisional electrical engineer, SWR, said that no additional power is spent for the decoration. "As we are using 36 PAR lights, which are a kind of LED bulbs for saffron colour and 29 each metal halide LED bulbs for white and green colours, there is no need for additional power. However, we have spent Rs 60,000 for hiring bulbs from a private agency. Under the guidance of Rajiv Kumar, chief electrical engineer, SWR, we completed installation and lights on Sunday for trial. Higher officials reviewed the decoration and suggested some corrections," he said.

Mahendra Singhi, a member of Zonal Railway Users Consultative Committee of SWR, noted that the SWR sensitizes people who visit Rail Soudha on national integrity and patriotism.

दि हिन्दु/मंगलूर
THE HINDU/MANGALORE
15 AUG 2017

# SWR's Independence Day celebrations

BENGALURU

Independence Day celebrations will be held at the Railway Institute Grounds, behind the Bangalore City Railway Station at 8.45 a.m. on Tuesday. A ceremonial parade will be held followed by a cultural programme, a release from SWR said.

टाइम्स आफ इंडिया/बेंगलूर
THE TIMES OF INDIA/BANGALORE
16 AUG 2017

**Celebrations at SWR**

A K Gupta, general manager, South Western Railway, unfurled the national flag and inaugurated the I-Day function at the Railway Sports Ground. He received guard of honour from the railway protection force (RPF).

प्रजा वाणी/हुबली
PRAJA VANI/HUBLI.
16 AUG 2017



2. ಹುಬ್ಬಳ್ಳಿಯ ರೈಲು ನಿಲ್ದಾಣ ಸಮೀಪ ಇರುವ 'ಸ್ವರ್ಣ ಪ್ಯಾರಾಡೈಸ್'ನಲ್ಲಿ ಆರಂಭಗೊಂಡ ಆಂಧ್ರ ಬ್ಯಾಂಕಿನ ನೂತನ ಶಾಖೆಯನ್ನು ನೈರುತ್ಯ ರೈಲ್ವೆ ಪ್ರಧಾನ ವ್ಯವಸ್ಥಾಪಕ ಎ.ಕೆ.ಗುಪ್ತಾ ಉದ್ಘಾಟಿಸಿದರು

→ The news is about Shri A.K.Gupta, GM/SWR inaugurated New branch of Andhra bank